ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ**

**ಜಿಲ್ಲಾ ನಗರಾಭಿವೃದ್ಧಿ ಕೋಶ ಕೊಪ್ಪಳ**

ದೂರವಾಣಿ ಸಂಖ್ಯೆ: **08539 - 221895** ಇ-ಮೇಲ್: **ka.koppal.dudc@gmail.com**

ಕಂ.ಸಂ:507734::ಕೆಓಪಿ–ಡಿಸಿ–11/23/2026 ದಿನಾಂಕ :21– 09–2026

## –: ಅಧಿಸೂಚನೆ : –

ವಿಷಯ : ಕೊಪ್ಪಳ ಜಿಲ್ಲೆಯ ನಗರಸಭೆಗಳಲ್ಲಿ ನೇರಪಾವತಿ ಅಡಿಯಲ್ಲಿ ಖಾಲಿ ಇರುವ ನೇರ ಪಾವತಿ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ : ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:513641/ DMA/ EST2/ OTH/08/2021 ದಿನಾಂಕ:18–11–2025.

– * – * – * –

ರಾಜ್ಯದ ಮಹಾನಗರಪಾಲಿಕೆ / ನಗರಸಭೆಗಳಲ್ಲಿ ನೇರಪಾವತಿ ಅಡಿಯಲ್ಲಿ ಖಾಲಿ ಇರುವ ನೇರಪಾವತಿ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖಿತ ಆದೇಶದಂತೆ ಅರ್ಹ ಅಭ್ಯರ್ಥಿಗಳಿಂದ ನಗರಸಭೆ ಕೊಪ್ಪಳ ಹಾಗೂ ನಗರಸಭೆ ಗಂಗಾವತಿಗಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರುವ ಎಲ್ಲಾ ಶಾಲಾ ದಾಖಲೆಗಳು ಸೇರಿದಂತೆ ಇತರ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಅಧಿಸೂಚನೆಯ ಅನುಬಂಧದಲ್ಲಿರುವ ನಮೂನೆಗಳೊಂದಿಗೆ ಕಡ್ಡಾಯವಾಗಿ ಭರ್ತಿ ಮಾಡಿ ಸಲ್ಲಿಸುವುದು.
2. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕಾಲಮಿತಿ

| ವಿವರ | ದಿನಾಂಕ: | ಅರ್ಜಿ ನಮೂನೆ ಪಡೆಯುವ ವಿಳಾಸ |
|---|---|---|
| ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ | 22–09–2026 | 1 ನಗರಸಭೆ ಕೊಪ್ಪಳ<br>2. ನಗರಸಭೆ ಗಂಗಾವತಿ |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 22–10–2026 | |

ಖಾಲಿ ಇರುವ ನೇರಪಾವತಿ ಪೌರಕಾರ್ಮಿಕರ ಹುದ್ದೆಗಳ ವಿವರ.

| ಕ್ರ.ಸಂ | ನಗರ ಸ್ಥಳೀಯ ಸಂಸ್ಥೆ ಹೆಸರು | **ಹಂಚಿಕೆ ಮಾಡಲಾದ ಖಾಲಿ ಹುದ್ದೆಗಳ ಸಂಖ್ಯೆ** | | |
|---|---|---|---|---|
| | | ನೇರಪಾವತಿ ಪೌರಕಾರ್ಮಿಕರ ಸಂಖ್ಯೆ | ಮ್ಯಾನ್ಯುವಲ್ ಸ್ಕ್ಯಾವೆಂಜರ್ಸ ಅಧಿನಿಯಮದಡಿ (ಶೇ.10 ರಷ್ಟು ಕಾಯ್ದಿರಿಸಿದ ಖಾಲಿ ಹುದ್ದೆಗಳ ಸಂಖ್ಯೆ) | ಒಟ್ಟು ಖಾಲಿ ಇರುವ ನೇರ ಪಾವತಿ ಹುದ್ದೆಗಳ ಸಂಖ್ಯೆ |
| 1 | ನಗರಸಭೆ ಕೊಪ್ಪಳ | 15 | 2 | 17 |
| 2 | ನಗರಸಭೆ ಗಂಗಾವತಿ | 27 | 4 | 31 |

| ಕ್ರ.ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು | . ಕನಿಷ್ಟ ವಿದ್ಯಾರ್ಹತೆ |
|---|---|---|---|
| 01 | ನಗರಸಭೆ ಕೊಪ್ಪಳ ನೇರ ಪಾವತಿ ಪೌರಕಾರ್ಮಿಕರು | 17 | 1. ವಿದ್ಯಾರ್ಹತೆ ಅನ್ವಯಿಸುವುದಿಲ್ಲ.<br>2. ಕನ್ನಡ ಭಾಷೆಯಲ್ಲಿ ಮಾತನಾಡಲು ಬರಬೇಕು<br>3. ಅರ್ಜಿ ಸಲ್ಲಿಸಲು ಅಧಿಸೂಚನೆ ಹೊರಡಿಸಿದ ದಿನಾಂಕ:21–09–2026ಕ್ಕೆ 18 ವರ್ಷ ಪೂರ್ಣಗೊಂಡಿರಬೇಕು ಗರಿಷ್ಠ ವಯೋಮಿತಿ 50 ವರ್ಷದೊಳಗಿರಬೇಕು. |
| 02 | ನಗರಸಭೆ ಗಂಗಾವತಿ ನೇರ ಪಾವತಿ ಪೌರಕಾರ್ಮಿಕರು | 31 | |

ಅರ್ಜಿ ಶುಲ್ಕ

| | |
|---|---|
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರರ್ಗ–1 ಹಾಗೂ ಮಹಿಳಾ ಅಭ್ಯರ್ಥಿಗಳು | ರೂ 100.00 |
| ಸಾಮಾನ್ಯ ವರ್ಗ, 2ಎ, 2ಬಿ, 3ಎ, 3ಬಿ ವರ್ಗಕ್ಕೆ | ರೂ 200.00 |

ಅರ್ಜಿ ಶುಲ್ಕವನ್ನು ಡಿ.ಡಿ. ಮೂಲಕ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು (ಡಿ.ಡಿ.ಯನ್ನು ಕೊಪ್ಪಳ ನಗರಸಭೆ ಸಂಬಂಧಿಸಿದ ಅಭ್ಯರ್ಥಿಗಳು ಪೌರಾಯುಕ್ತರು ನಗರಸಭೆ ಕೊಪ್ಪಳ, ಗಂಗಾವತಿಗೆ ಸಂಬಂಧಿಸಿದ ಅಭ್ಯರ್ಥಿಗಳು ಪೌರಾಯುಕ್ತರು ನಗರಸಭೆ ಗಂಗಾವತಿ ಹೆಸರಿಗೆ ತೆಗೆಯುವುದು) ಅರ್ಜಿ ಶುಲ್ಕವನ್ನು ಸಲ್ಲಿಸದೆ ಇರುವ ಅರ್ಜಿಗಳನ್ನು ಹಾಗೂ ಅರ್ಜಿಯಲ್ಲಿ ನಮೂದಿಸಿದ ಪೂರ್ಣ ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ವಯೋಮಿತಿ/ವಿದ್ಯಾರ್ಹತೆ :**

1. ಕನಿಷ್ಟ 18 ವರ್ಷ ಗರಿಷ್ಟ ವಯೋಮಿತಿ 50 ವರ್ಷದೊಳಗಿರಬೇಕು.
2. ವಿದ್ಯಾರ್ಹತೆ ಅನ್ವಯಿಸುವುದಿಲ್ಲ. ಆದರೆ ಕನ್ನಡ ಭಾಷೆಯಲ್ಲಿ ಮಾತನಾಡಲು ಬರಬೇಕು.

**ಪರಿಗಣನೆಯ ಅಂಶಗಳು :**

1. ಅರ್ಜಿದಾರರು ಭಾರತೀಯ ನಾಗರೀಕನಾಗಿರತಕ್ಕದ್ದು.
2. ಆಯಾ ಸ್ಥಳೀಯ ಸಂಸ್ಥೆಗಳಲ್ಲಿ ಈ ಹಿಂದೆ ಹೊರಗುತ್ತಿಗೆ, ದಿನಗೂಲಿ/ ಗುತ್ತಿಗೆ ಆಧಾರದ ಮೇಲೆ ಕನಿಷ್ಟ ಒಂದು ವರ್ಷ ಪೌರಕಾರ್ಮಿಕ, ಲೋಡರ್ಸ್, ಯುಜಿಡಿ/ಹೆಲ್ಪರ್ಸ್, ಕ್ಲೀನರ್ಸ, ಹೆಲ್ಪರ್ಸಗಳಾಗಿ ಕಾರ್ಯನಿರ್ವಹಿಸುತ್ತಿರುವ/ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಪ್ರಥಮ ಆಧ್ಯತೆ ನೀಡಲಾಗುವುದು. .(ಕಾರ್ಯನಿರ್ವಹಿಸಿದ ಅವಧಿಗೆ ದೃಢೀಕೃತ ESI/PF ವೇತನಪಾವತಿಸಿರುವ ಬ್ಯಾಂಕ ಪಾಸಬುಕ್ ಅಥವಾ ಹಾಜರಾತಿ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸುವುದು)
3. ಆಯಾ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ/ ದಿನಗೂಲಿ/ ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್–19 ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ಮರಣ ಹೊಂದಿದ ಪೌರಕಾರ್ಮಿಕರ ಕುಟುಂಬದ ಒಬ್ಬ ಸದಸ್ಯರನ್ನು ನೇರಪಾವತಿಯಡಿ ನೇಮಕಮಾಡಿಕೊಳ್ಳಲು ಪರಿಗಣಿಸಲಾಗುವುದು. (ಕೋವಿಡ್–19 ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ಮೃತರಾದಲ್ಲಿ ಜಿಲ್ಲಾ ವೈಧ್ಯಾಧಿಕಾರಿಗಳ ಹಾಗೂ ಪೌರಾಯುಕ್ತರ ದೃಢೀಕರಣವನ್ನು ಸಲ್ಲಿಸುವುದು)
4. ಆಯಾ ಸ್ಥಳೀಯು ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಟ ಒಂದು ವರ್ಷ ಲೋಡರ್ಸ/ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್, ಹೆಲ್ಪರ್ಸಗಳಾಗಿ ಘನತ್ಯಾಜ್ಯ ಸಂಸ್ಕರಣಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸಿದ ಅನುಭವವುಳ್ಳ ಸ್ಥಳೀಯ ಸ್ವಚ್ಛತಾ ಕೆಲಸಗಾರರನ್ನು ಪರಿಗಣಿಸುವುದು. (ಕಾರ್ಯನಿರ್ವಹಿಸಿದ ಅವಧಿಗೆ ದೃಢೀಕೃತ ESI/PF/ ವೇತನಪಾವತಿಸಿರುವ ಬ್ಯಾಂಕ ಪಾಸ ಬುಕ್ ಅಥವಾ ಹಾಜರಾತಿ ದಾಖಲೆಗಳನ್ನು ಸಲ್ಲಿಸುವುದು)
5. ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ ನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ಥರುಗಳಿಗೆ ಅಥವಾ ಅವರ ಕುಟುಂಬದ ಸದಸ್ಯರಿಗೆ (ಗಂಡ, ಹೆಂಡತಿ, ಮಗ ಮಗಳು) ಒಟ್ಟು ಖಾಲಿ ಇರುವ ಹುದ್ದೆಗಳ ಪೈಕಿ ಶೇ.10ರಷ್ಟು ಹುದ್ದೆಗಳನ್ನು ಮೀಸಲಿಡಲಾಗಿದ್ದು ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದಲ್ಲಿ ಸದರಿ ಹುದ್ದೆಗಳನ್ನು ಇತರೆ ವರ್ಗಗಳಿಂದ ಭರ್ತಿ ಮಾಡಲು ಕ್ರಮವಹಿಸಲಾಗುವುದು.
6. ಮೇಲ್ಕಾಣಿಸಿದ ಕ್ರಮಸಂಖ್ಯೆ 2 ರಿಂದ 5 ರಲ್ಲಿ ತಿಳಿಸಿರುವ ವರ್ಗದವರಿಗೆ ಆಧ್ಯತೆ ನೀಡಿದ ನಂತರ ಬಾಕಿ ಉಳಿಯುವ ಖಾಲಿ ಹುದ್ದೆಗಳನ್ನು ಇತರೆ ವರ್ಗಗಳಿಂದ ಭರ್ತಿ ಮಾಡಲಾಗುವುದು.
7. ನೇರಪಾವತಿಯಡಿ ನೇಮಕಾತಿಮಾಡಿಕೊಳ್ಳುವ ಪದ್ಧತಿ ಕರ್ನಾಟಕ ಅನುಸೂಚಿತಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮದಲ್ಲಿ ಉಲ್ಲೇಖಿಸಿರುವುದಿಲ್ಲ. ಆದ ಕಾರಣ ನೇರಪಾವತಿಯಡಿ ನೇಮಕಾತಿ ಪ್ರಕ್ರಿಯೆಯು ಸದರಿ ಅಧಿನಿಯಮಕ್ಕೆ ಒಳಪಟ್ಟಿರುವುದಿಲ್ಲ ಮತ್ತು ಮೀಸಲಾತಿ ಅನ್ವಯಿಸುವುದಿಲ್ಲ (ಸಮಾಜ ಕಲ್ಯಾಣ ಇಲಾಖೆ ಇವರು ನೀಡಿರುವ ಅಭಿಪ್ರಾಯ ಅನುಸರಿಸಿ) (2 ರಿಂದ 5 ರಲ್ಲಿ ತಿಳಿಸಿರುವಂತಹ ಅಭ್ಯರ್ಥಿಗಳು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ದೃಢೀಕರಣ ಪಡೆದು ಸಲ್ಲಿಸುವುದು)

**ನೇಮಕಾತಿ ಷರತ್ತುಗಳು :**

1. ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ಕಾಯ್ದೆಯನ್ವಯ ವೇತನ ನಿಗದಿಪಡಿಸುವುದು ಹಾಗೂ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ಪರಿಷ್ಕರಿಸುವ ವೇತನವನ್ನು ಮತ್ತು ಪಿ.ಎಫ್ ಮತ್ತು ಇ.ಎಸ್.ಐ ಸೌಲಭ್ಯವನ್ನು ಕಲ್ಪಿಸುವುದು.
2. ನೇರಪಾವತಿಯಡಿ ಆಯ್ಕೆಗೊಂಡ ಪೌರಕಾರ್ಮಿಕರು ತಾತ್ಕಾಲಿಕವಾಗಿನೇಮಕವಾಗಿದ್ದು, ಖಾಯಂ ನೌಕರರಿಗೆ ನೀಡುವಂತಹ ಇತರೇ ಯಾವುದೇ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ. ಮತ್ತು ವ್ಯಕ್ತಿಗತವಾಗಿ ಅಥವಾ ಸಂಘಗಳನ್ನು ಸ್ಥಾಪಿಸಿಕೊಂಡು ಖಾಯಂ ಮಾಡುವಂತೆ ಒತ್ತಾಯಿಸುವಂತಿಲ್ಲ. ಹಾಗೂ ಖಾಯಂ ಮಾಡುವಂತೆ ಯಾವುದೇ ನ್ಯಾಯಾಲಯದ ಮೊರೆ ಹೋಗುವುದಕ್ಕೆ ಅಸ್ಪದವಿರುವುದಿಲ್ಲ. (ಈ ಕುರಿತು ಆಯ್ಕೆಗೊಂಡ ಅಭ್ಯರ್ಥಿಗಳಿಂದ ರೂ 1000.00 ಮುಖಬೆಲೆಯ Notary Affidavit ಕಡ್ಡಾಯವಾಗಿ ಸಲ್ಲಿಸುವುದು)
3. ನೇರಪಾವತಿಗೆ ಆಯ್ಕೆಯಾಗುವವರು ಆರೋಗ್ಯವಂತರಾಗಿರಬೇಕು ಯಾವುದೇ ಕಾಯಿಲೆಗಳಿಂದ ಬಳಲುತ್ತಿರುವವರಾಗಿರಬಾರದು ಈ ಕುರಿತು ವೈದ್ಯಾಧಿಕಾರಿಗಳಿಂದ ವೈದ್ಯಕೀಯ ದೃಢೀಕರಣಪತ್ರ ಪಡೆಯತಕ್ಕದ್ದು.
4. ನೇರಪಾವತಿಯಡಿ ಆಯ್ಕೆ ಹೊಂದಿರುವವರು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಮೃತರಾದಲ್ಲಿ ಅನುಕಂಪ ನೇಮಕಾತಿ, ಪಿಂಚಣಿ, ಉಪದಾನ, ಇತ್ಯಾದಿ ಯಾವುದೇ ಸೇವಾಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
5. ನೇರಪಾವತಿಯಡಿ ಆಯ್ಕೆ ಹೊಂದಿರುವ ಪೌರಕಾರ್ಮಿಕರು, ಸ್ವಚ್ಛತಾ ಕೆಲಸವನ್ನೇ ನಿರ್ವಹಿಸಬೇಕು ಅದಲ್ಲದೇ ಇತರೆ ಯಾವುದೇ ಕೆಲಸಕ್ಕೆ ಅಥವಾ ಕಛೇರಿ ಕೆಲಸಗಳಿಗೆ ನಿರ್ವಹಿಸುವಂತಿಲ್ಲ/ನಿಯೋಜಿಸುವಂತಿಲ್ಲ.

6. ನೇರಪಾವತಿಯಡಿ ಆಯ್ಕೆಯಾದ ಅಭ್ಯರ್ಥಿಗಳು ಹೊರತು ಸದರಿಯವರ ಹೆಸರಿನಲ್ಲಿ ಯಾವುದೇ ಸಂದರ್ಭದಲ್ಲಿಯೂ ಬೇರೊಬ್ಬರು ಕರ್ತವ್ಯನಿರ್ವಹಿಸುವಂತಿಲ್ಲ. ಯಾವುದೇ ಮುನ್ಸೂಚನೆ ನೀಡದೇ ಸದರಿಯವರುಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಕ್ರಮಕೈಗೊಳ್ಳಲಾಗುವುದು.
7. ನೇರಪಾವತಿಯಡಿ ಆಯ್ಕೆಗೊಂಡವರು ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದಲ್ಲಿ ಅಥವಾ ಕಛೇರಿ ಮುಖ್ಯಸ್ಥರು ನೀಡುವ ಸೂಚನೆ ಮತ್ತು ಸಲಹೆಗಳನ್ನು ಪಾಲಿಸದೇ ಇದ್ದಲ್ಲಿ ತಮ್ಮನ್ನು ಯಾವುದೇ ಮುನ್ಸೂಚನೆ ನೀಡದೇ ಕರ್ತವ್ಯದಿಂದ ಬಿಡುಗಡೆಗೊಳಿಸಲು ಕ್ರಮಕೈಗೊಳ್ಳಲಾಗುವುದು.
8. ನೇರಪಾವತಿಯಡಿ ಆಯ್ಕೆಗೊಂಡಿರುವ ನೌಕರರು ಸರ್ಕಾರದಿಂದ/ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆಗಳಿಗೆ ಬದ್ಧರಾಗಿರತಕ್ಕದ್ದು. (ಈ ಕುರಿತು ಆಯ್ಕೆಗೊಂಡ ಅಭ್ಯರ್ಥಿಗಳಿಂದ Notary Affidavit ಕಡ್ಡಾಯವಾಗಿ ಸಲ್ಲಿಸುವುದು)
9. ಅರ್ಜಿಸಲ್ಲಿಸಿರುವ ನೇರಪಾವತಿ ಪೌರಕಾರ್ಮಿಕರ ಗರಿಷ್ಠ ವಯೋಮಿತಿ ಕನಿಷ್ಠ 18 ವರ್ಷ ಗರಿಷ್ಠ 50 ವರ್ಷಗಳು ಮೀರಕೂಡದು ಅಭ್ಯರ್ಥಿಯ ವಯಸ್ಸನ್ನು ಜನನ ಪ್ರಮಾಣ ಪತ್ರ/ ಶೈಕ್ಷಣಿಕ ವಿದ್ಯಾರ್ಹತೆ ದಾಖಲಾತಿಗಳನ್ನು ಆಧರಿಸಿ ವಯೋಮಿತಿ ನಿರ್ಧರಿಸಲಾಗುವುದು. ಸಂದೇಹಾಸ್ಪದ ಪ್ರಕರಣಗಳಲ್ಲಿ ವೈದ್ಯರ ಅಭಿಪ್ರಾಯ ಪಡೆಯಲಾಗುವುದು.
10. ಅರ್ಜಿಯಲ್ಲಿ ತಪ್ಪು/ ಸುಳ್ಳು ಮಾಹಿತಿ ನೀಡಿ ಉದ್ಯೋಗಪಡೆದಲ್ಲಿ, ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ವಜಾಗೊಳಿಸುವುದಲ್ಲದೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.
11. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೇ ದಿನವು ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗುವುದು.
12. ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿಮಾಡಿ ಅಧ್ಯಕ್ಷರು ಆಯ್ಕೆ ಮತ್ತು ನೇರನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು ಕೊಪ್ಪಳರವರ ಹೆಸರಿನಲ್ಲಿ ಪೌರಾಯುಕ್ತರು/ಮುಖ್ಯಾಧಿಕಾರಿಗಳು ಆಯಾ ನಗರಸ್ಥಳೀಯಸಂಸ್ಥೆಗಳ ಮೂಲಕ ಸಲ್ಲಿಸುವುದು ನೇರವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
13. ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರುಗಳ ಮೂಲಕ ಕಳುಹಿಸಿ ಕೊಡಲಾಗುವುದು.
14. ಅಂತಿಮವಾಗಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಮುನ್ನ ಯಾವುದೇ ಹಂತದಲ್ಲಿ ಯಾವುದೇ ಕಾರಣ/ಮಾಹಿತಿ ನೀಡದೇ ಈ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದು ಪಡಿಸುವ ಅಥವಾ ವಿಧಿಸಲಾಗಿರುವ ಯಾವುದೇ ಷರತ್ತನ್ನು ಸಡಿಲಗೊಳಿಸುವ ಅಥವಾ ಹೆಚ್ಚುವರಿ ಷರತ್ತನ್ನು ವಿಧಿಸುವ, ತುಂಬಲಾಗುವ ಹುದ್ದೆಗಳ ಸಂಖ್ಯೆಯನ್ನು ಬದಲಾಯಿಸುವ ನಿರ್ಣಯಿಸುವ ಅಧಿಕಾರವನ್ನು ಅಧ್ಯಕ್ಷರು ಆಯ್ಕೆ ಮತ್ತು ನೇರನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ, ಕೊಪ್ಪಳಜಿಲ್ಲೆರವರುಕಾಯ್ದಿರಿಸಿಕೊಂಡಿರುತ್ತಾರೆ.
15. ಅಭ್ಯರ್ಥಿಯ ಹೆಸರು ಅಂತಿಮ ಆಯ್ಕೆಪಟ್ಟಿಯಲ್ಲಿ ಸೇರ್ಪಡೆಯಾಗಿದೆ ಎಂಬುದರ ಆಧಾರದಮೇಲೆ ಅಭ್ಯರ್ಥಿಗೆ ನೇಮಕಾತಿ ಹಕ್ಕುದೊರೆಯುವುದಿಲ್ಲ.
16. ನಗರಸಭೆಗಳಲ್ಲಿ ಹಾಲಿ ಹೊರಗುತ್ತಿಗೆ/ ದಿನಗೂಲಿ ಗುತ್ತಿಗೆ ಆಧಾರದಮೇಲೆ, ಕನಿಷ್ಠ ಒಂದು ವರ್ಷ ಪೌರಕಾರ್ಮಿಕ/ಲೋಡರ್ಸ್, ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ, ಹೆಲ್ಪರ್ಸ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ / ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಜೇಷ್ಠತೆಯನ್ನು ಸೇವಾ ಅವಧಿಯ ಜೇಷ್ಠತೆಯ ಮೇರೆಗೆ ಪರಿಗಣಿಸಲಾಗುವುದು. ಒಂದುವೇಳೆ ಇಬ್ಬರು ಮತ್ತು ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದಪಕ್ಷದಲ್ಲಿ ಅಂತಹ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆವಯಸ್ಕರಿಗಿಂತ ಮೇಲೆ ಪರಿಗಣಿಸಲಾಗುವುದು. ಸೇವಾ ಅವಧಿ ಮತ್ತು ವಯಸ್ಸು ಒಂದೇ ಆಗಿದ್ದಲ್ಲಿ ಲಾಟರಿಮೂಲಕ ಪರಿಗಣಿಸಲಾಗುವುದು.
17. ಮೇಲ್ಕಂಡ ನೇರ ಪಾವತಿ ಹುದ್ದೆಗಳಿಗೆ ಮೀಸಲಾತಿ ಅನ್ವಯಿಸುವುದಿಲ್ಲ.
18. ಅಭ್ಯರ್ಥಿಗಳು ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರಬಾರದು.
19. ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿಯಲ್ಲಿ ಶಿಸ್ತು ಕ್ರಮಕ್ಕೆ ಒಳಗಾಗಿ ಸೇವೆಯಿಂದ ವಜಾಗೊಂಡಿರಬಾರದು.
20. ಹೆಚ್ಚಿನಮಾಹಿತಿಗಾಗಿ ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾ ಆಡಳಿತ ಭವನ, ಕೊಪ್ಪಳ ಹಾಗೂ ಪೌರಾಯುಕ್ತರು ನಗರಸಭೆ ಕೊಪ್ಪಳ/ ಗಂಗಾವತಿ ಇವರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

**ಪೌರಾಯುಕ್ತರ ಕರ್ತವ್ಯಗಳು :**

ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಸಮಯ ಮುಕ್ತಾಯವಾದ ದಿನದಂದು ಸಂಜೆ 6–00 ಗಂಟೆಯೊಳಗೆ ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆಯನ್ನು ಈ ಕಛೇರಿಗೆ ಲಿಖಿತವಾಗಿ ಸಲ್ಲಿಸುವುದು.

1. ತಮ್ಮ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕೋರುವ ಇ.ಎಸ್.ಐ/ಪಿ.ಎಫ್ ಹಾಗೂ ಇತರೆ ಅಗತ್ಯವಿರುವ ದಾಖಲೆಗಳನ್ನು ದೃಢೀಕರಿಸಿ ನೀಡುವುದು.
2. ಅವಧಿ ಮೀರಿದ ನಂತರದಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸತಕ್ಕದ್ದಲ್ಲ. ಒಂದು ವೇಳೆ ಸ್ವೀಕರಿಸಿದಲ್ಲಿ ತಮ್ಮನ್ನೆ ಜವಾಬ್ದಾರರನ್ನಾಗಿ ಮಾಡಲಾಗುವುದು.

3. ಸ್ವೀಕೃತಿಯಾದ ಅರ್ಜಿಗಳನ್ನು ಪರಿಶೀಲಿಸಿ ಸದರಿ ಗುತ್ತಿಗೆ ಅರ್ಹತೆಯನ್ನು (ನೇರಪಾವತಿಗೆ) ಹೊಂದಿರುವ ಬಗ್ಗೆ ಖಚಿತಪಡಿಸಿಕೊಂಡು ಸೂಕ್ತ ಶಿಫಾರಸ್ಸಿನೊಂದಿಗೆ ಹಾಗೂ ದಾಖಲೆಗಳೊಂದಿಗೆ ಅಧ್ಯಕ್ಷರು ಆಯ್ಕೆ ಮತ್ತು ನೇರನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು ಕೊಪ್ಪಳ ರವರಿಗೆ ಸಲ್ಲಿಸುವುದು.
4. ಸ್ವೀಕೃತಿಯಾದ ಅರ್ಜಿಗಳನ್ನು ಪರಿಶೀಲಿಸಿ, ಪರಿಶೀಲಿಸಿದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಅವಧಿ ಮುಕ್ತಾಯವಾದ ಮರು ದಿನಗಳೊಳಗಾಗಿ ಈ ಕಛೇರಿಗೆ ಸಲ್ಲಿಸುವುದು.
5. ಅಧಿಸೂಚನೆಯಲ್ಲಿರುವ ಅರ್ಜಿನಮೂನೆಯನ್ನು ಅಭ್ಯರ್ಥಿಗಳಿಗೆ ಶುಲ್ಕ ಭರಿಸಿಕೊಂಡು ದ್ವಿಪ್ರತಿಯಲ್ಲಿನೀಡುವುದು.
6. ಅಭ್ಯರ್ಥಿಗಳ ವಯಸ್ಸಿನ ಬಗ್ಗೆ ಯಾವುದೇ ಗೊಂದಲಗಳಿಗೆ ಆಸ್ಪದ ನೀಡದಂತೆ ಜನನ ಪ್ರಮಾಣ ಪತ್ರ, ಶೈಕ್ಷಣಿಕ ದಾಖಲೆಗಳು, ವೈದ್ಯರ ದೃಢೀಕರಣ ಪರಿಶೀಲಿಸಿಕೊಂಡು, ನೈಜತೆ ಬಗ್ಗೆ ದೃಢೀಕರಣ ಸಲ್ಲಿಸುವುದು.

**ವಿಶೇಷ ಷರತ್ತುಗಳು :**

1. ಶುಲ್ಕ ಭರಿಸಿ ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಗಳು ನೇರಪಾವತಿ ಆಯ್ಕೆಯಾಗಿರುವುದಾಗಿ ಭಾವಿಸತಕ್ಕದಲ್ಲ.
2. ಆಯ್ಕೆ ಸಂದರ್ಭದಲ್ಲಿ ಹೆಚ್ಚಿನ ದಾಖಲೆಗಳು ಅವಶ್ಯಕ ಎಂದು ಕಂಡುಬಂದಲ್ಲಿ ಆಯ್ಕೆ ಸಮಿತಿಗೆ ದಾಖಲೆಗಳನ್ನು ಪೂರೈಸತಕ್ಕದ್ದು.
3. ಪೌರಕಾರ್ಮಿಕರ ನೇರಪಾವತಿ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ನೇರಪಾವತಿ ಪೌರಕಾರ್ಮಿಕರ ನೇಮಕಾತಿ ಆಯ್ಕೆ ಸಮಿತಿ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ ಕೊಪ್ಪಳ ರವರು ಕಾಯ್ದಿರಿಸಿಕೊಂಡಿರುತ್ತಾರೆ.

ಸದರಿ ಅಧಿಸೂಚನೆಯಲ್ಲಿ ಯಾವುದಾದರೂ ಹೆಚ್ಚುವರಿ ಅಂಶಗಳನ್ನು ಸೇರಿಸುವ ಮತ್ತು ತೆಗೆದುಹಾಕುವ ಅಧಿಕಾರವನ್ನು ಅಧ್ಯಕ್ಷರು ಆಯ್ಕೆ ಮತ್ತು ನೇರನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು ಕೊಪ್ಪಳ ರವರು ಕಾಯ್ದಿರಿಸಿಕೊಂಡಿರುತ್ತಾರೆ.

**(ಡಾ॥ ಸುರೇಶ ಬಿ. ಇಟ್ನಾಳ ಭಾ.ಆ.ಸೇ)**
ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಸಮಿತಿ
ಹಾಗೂ ಜಿಲ್ಲಾಧಿಕಾರಿ.ಕೊಪ್ಪಳ ಜಿಲ್ಲೆ

ಪ್ರತಿ ಮಾಹಿತಿಗಾಗಿ

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿ ಸೂಕ್ತ ಕ್ರಮಕ್ಕಾಗಿ

1. ಯೋಜನಾನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿಕೋಶ, ಕೊಪ್ಪಳ ರವರ ಕಾರ್ಯಾಲಯದ ಸೂಚನಾಫಲಕದಲ್ಲಿ ಪ್ರಚುರ ಪಡಿಸಲು ಸೂಚಿಸಿದೆ
2. ಸಹಾಯಕ ಆಯುಕ್ತರು ಉಪ ವಿಭಾಗ ಕೊಪ್ಪಳ ಇವರಿಗೆ ಮಾಹಿತಿಗಾಗಿ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ
3. ಉಪ ನಿರ್ದೇಶಕರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ ಇವರಿಗೆ ಮಾಹಿತಿಗಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಚುರಪಡಿಸಲು ಸೂಚಿಸಿದೆ.
4. ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೊಪ್ಪಳ ಇವರಿಗೆ ಮಾಹಿತಿಗಾಗಿ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.
5. ತಹಶೀಲ್ದಾರರು ಕೊಪ್ಪಳ/ಗಂಗಾವತಿ/ಯಲಬುರ್ಗಾ/ಕುಷ್ಟಗಿ/ಕನಕಗಿರಿ ಇವರಿಗೆ ಮಾಹಿತಿಗಾಗಿ.
6. ಪೌರಾಯುಕ್ತರು, ಕೊಪ್ಪಳ/ ಗಂಗಾವತಿ ರವರ ಕಾರ್ಯಾಲಯದ ಸೂಚನಾಫಲಕದಲ್ಲಿ ಪ್ರಚುರ ಪಡಿಸಲು ಸೂಚಿಸಿದೆ ಈ ಕುರಿತು ಛಾಯಾ ಚಿತ್ರದೊಂದಿಗೆ ವರದಿ ಸಲ್ಲಿಸುವುದು.
7. ಮುಖ್ಯಾಧಿಕಾರಿಗಳು ಪುರಸಭೆ ಕುಷ್ಟಗಿ/ ಕಾರಟಗಿ ರವರ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಲು ಸೂಚಿಸಿದೆ ಈ ಕುರಿತು ಛಾಯಾ ಚಿತ್ರದೊಂದಿಗೆ ವರದಿ ಸಲ್ಲಿಸುವುದು.
8. ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಯಲಬುರ್ಗಾ ಕುಕನೂರ ತಾವರಗೇರಾ ಕನಕಗಿರಿ ಭಾಗ್ಯನಗರ ಹನುಮಸಾಗರ ರವರ ಕಾರ್ಯಾಲಯದ ಸೂಚನಾಫಲಕದಲ್ಲಿ ಪ್ರಚುರ ಪಡಿಸಲು ಸೂಚಿಸಿದೆ ಈ ಕುರಿತು ಛಾಯಾ ಚಿತ್ರದೊಂದಿಗೆ ವರದಿ ಸಲ್ಲಿಸುವುದು.
9. ಕಛೇರಿ ಪ್ರತಿ

**(ಡಾ॥ ಸುರೇಶ ಬಿ. ಇಟ್ನಾಳ ಭಾ.ಆ.ಸೇ)**
ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಸಮಿತಿ
ಹಾಗೂ ಜಿಲ್ಲಾಧಿಕಾರಿ.ಕೊಪ್ಪಳ ಜಿಲ್ಲೆ

**ಅರ್ಜಿ ನಮೂನೆ**

ರವರಿಗೆ
ಮಾನ್ಯ ಅಧ್ಯಕ್ಷರು,
ನೇರ ಪಾವತಿ ಪೌರಕಾರ್ಮಿಕರ ನೇಮಕಾತಿ
ಆಯ್ಕೆ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ
ಪೌರಾಯುಕ್ತರು

_________________________________ ಇವರ ಮುಖಾಂತರ

ಮಾನ್ಯರೆ,

ವಿಷಯ : ಕೊಪ್ಪಳ ಜಿಲ್ಲೆಯ ಕೊಪ್ಪಳ/ ಗಂಗಾವತಿ ನಗರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ನೇರಪಾವತಿ ಹುದ್ದೆಗೆ ಭರ್ತಿ ಮಾಡುವ ಕುರಿತು.

ಉಲ್ಲೇಖ 1 ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರುರವರ ಸುತ್ತೋಲೆ ಸಂಖ್ಯೆ:513641/DMA/ EST2/ OTH/08/2021 ದಿನಾಂಕ:18-11-2025

2 ತಮ್ಮ ಕಾರ್ಯಾಲಯದ ನೇರ ಪಾವತಿ ಅಧಿಸೂಚನೆ ಆದೇಶ ಸಂಖ್ಯೆ ಕಂ.ಸಂ.: 507734::ಕೆಓಪಿ-ಡಿಸಿ-11/23/2026 ದಿನಾಂಕ :21-09-2026.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಉಲ್ಲೇಖ(1)ಮತ್ತು (2)ರ ಅಧಿಸೂಚನೆಯನ್ವಯ ಕೊಪ್ಪಳ ಜಿಲ್ಲೆಯ ನಗರಸಭೆ ಕೊಪ್ಪಳ/ ನಗರಸಭೆ ಗಂಗಾವತಿಯಲ್ಲಿ ಮಂಜೂರಾಗಿರುವ ನೇರ ಪಾವತಿ ಪೌರಕಾರ್ಮಿಕರ ಖಾಲಿ ಹುದ್ದೆಗಳಿಗೆ ನಗರಸಭೆಯಲ್ಲಿ ಹಾಲಿ ಹೊರಗುತ್ತಿಗೆ/ ದಿನಗೂಲಿ ಗುತ್ತಿಗೆ ಆಧಾರದಮೇಲೆ, ಕನಿಷ್ಟ ಒಂದು ವರ್ಷ ಪೌರಕಾರ್ಮಿಕ/ಲೋಡರ್ಸ್, ಯುಜಿಡಿಹೆಲ್ಪರ್ಸ್, ಕ್ಲೀನರ್ಸ, ಹೆಲ್ಪರ್ಸ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ / ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಉಲ್ಲೇಖಿತ ರನ್ವಯ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆ ಈ ಕೆಳಗೆ ಸಹಿ ಮಾಡಿದ ನಾನು ______________________ ಹುದ್ದೆಗೆ ನೇರ ಪಾವತಿಯಡಿಲ್ಲಿ ಆಯ್ಕೆಗೆ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.

| | | |
|---|---|---|
| 1 | ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2 | ತಂದೆ /ಗಂಡನ ಹೆಸರು | |
| | ತಾಯಿಯ ಹೆಸರು | |
| 4 | ಅರ್ಜಿದಾರನ/ಳ ಜನ್ಮ ದಿನಾಂಕ | |
| 5 | ವಯಸ್ಸು (ದಿನಾಂಕ:21-09-2026ಕ್ಕೆ ಇರುವಂತೆ ಅಭ್ಯರ್ಥಿಯ ವಯಸ್ಸು) ವರ್ಷ ತಿಂಗಳು ದಿನ | |
| 6 | ಜನ್ಮ ದಿನಾಂಕ & ವಯಸ್ಸಿಗೆ ಸಂಬಂಧಿಸಿದಂತೆ ಜನನ ಪ್ರಮಾಣ ಪತ್ರ/ ಶೈಕ್ಷಣಿಕ ವಿದ್ಯಾರ್ಹತೆ ದಾಖಲೆಗಳು ವೈದ್ಯರ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಸಲ್ಲಿಸುವುದು. ಸಲ್ಲಿಸಿದ ದಾಖಲೆಗಳನ್ನು ನಮೂದಿಸುವುದು | |
| 7 | ಲಿಂಗ ಪುರುಷ/ಮಹಿಳೆ/ಇತರೆ | |
| 8 | ರಾಷ್ಟ್ರೀಯತೆ ಮತ್ತು ಧರ್ಮ | |
| 9 | ಜಾತಿ ಮತ್ತು ಉಪ ಜಾತಿ (ಜಾತಿವಾರು ಪ್ರಮಾಣ ಪತ್ರ ಲಗತ್ತಿಸುವುದು) ನಮೂದಿಸುವುದು | |
| 10 | ವಿವಾಹಿತರಾಗಿದ್ದಲ್ಲಿ ಒಬ್ಬರಿಗಿಂತ ಹೆಚ್ಚು ಜೀವಂತ ಗಂಡ ಅಥವಾ ಹೆಂಡತಿ ಇದ್ದಾರೆಯೇ? | |

| | | |
|---|---|---|
| 11 | ಅಭ್ಯರ್ಥಿಯು ಯಾವುದಾದರೂ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿದ್ದಾರೆಯೇ? | |
| 12 | ಅಭ್ಯರ್ಥಿಯು ಸರ್ಕಾರಿ ಸೇವೆಯಿಂದ ಅಥವಾ ಬಾಕಿ ಯಾವ್ಯದಾದರು ಇನ್ನಾವುದಾರರೂ ಸೇವೆಯಿಂದ ವಜಾಮಾಡಲಾತಿದೆಯೆ? ಅಥವಾ ತೆಗೆದುಹಾಕಲ್ಪಟ್ಟಿದ್ದಾರೆಯೆ? | |
| 13 | ಪ್ರಸ್ತುತ ಪೌರಕಾರ್ಮಿಕರ ಹುದ್ದೆಯನ್ನು ಯಾವ ನಗರಸ್ಥಳೀಯ ಸಂಸ್ಥೆಯಲ್ಲಿ ನಿರ್ವಹಿಸಲಾಗುತ್ತಿದೆ.? | |
| 14 | ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ/ಕನಿಷ್ಟ ಒಂದು ವರ್ಷ ಪೌರಕಾರ್ಮಿಕರ ಲೋಡರ್ಸ್, ಯುಜಿಡಿ ಹೆಲ್ಪರ್ಸ್, ಕ್ಲೀನರ್ ಹಾಗೂ ಹೆಲ್ಪರ್ಸ್‌ಗಳಾಗಿ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ /ಕಾರ್ಯನಿರ್ವಹಿಸಿರುವಿರೆ? ಹಾಗಿದ್ದಲ್ಲಿ ಸಂಬಂಧಿಸಿದ ಪೌರಾಯುಕ್ತರಿಂದ ಪಡೆದ ದೃಢೀಕರಣ ಸಲ್ಲಿಸುವುದು | |
| 15 | ಕಾರ್ಯ ನಿರ್ವಹಿಸಿರುವ ಅವಧಿಗೆ ಎ.ಎಸ್.ಐ ಮತ್ತು ಪಿ,ಎಫ್ ವಚಿತಿಕೆ ಭರಣಾ ಮಾಡಿರುವ ಕುರಿತು ದೃಢೀಕೃತ ಪ್ರತಿಗಳು ಹಾಗೂ ದಾಖಲೆ ಲಗತ್ತಿಸುವುದು/ ಲಗತ್ತಿಸಿದೆಯೆ? | |
| 16 | ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್ 19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರ ಕಾರಣಗಳಿಂದ ಮರಣವಾದ ಕುಟುಂಬ ಸದಸ್ಯ ಅಭ್ಯರ್ಥಿಯೇ? | |
| 17 | ಮ್ಯಾನುಯಲ್ ಸ್ಕ್ಯಾವೆಂಜರ್ಸ್ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ಥರುಗಳಿಗೆ ಅಥವಾ ಅವರ ಕುಟುಂಬದ ಸದಸ್ಯ ಅಭ್ಯರ್ಥಿಯೇ | |
| 18 | ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಶಾರೀರಿಕ ಸುಸ್ಥಿತಿ ದೃಢೀಕರಣ ಪ್ರಮಾಣ ಪತ್ರವನ್ನು ಲಗತ್ತಿಸುವುದು. | |
| 19 | ಲಗತ್ತಿಸಿದ ದಾಖಲೆಗಳ ಸಂಖ್ಯೆ | |

ಸೂಚನೆ:– ಅಭ್ಯರ್ಥಿಗಳು ಎಲ್ಲಾ ಕಾಲಂ ಗಳನ್ನು ಕಡ್ಡಾಯವಾಗಿ ಭರ್ತಿಮಾಡತಕ್ಕದ್ದು ಹಾಗೂ ಮೇಲಿನ ಕೋಷ್ಟಕ ದಲ್ಲಿಯ ಎಲ್ಲಾ ಅಂಶಗಳಿಗೆ ಪೂರಕ ದೃಢೀಕೃತ ಪ್ರಮಾಣಪತ್ರಗಳನ್ನು ಲಗತ್ತಿಸತಕ್ಕದ್ದು.

**–:ಅಭ್ಯರ್ಥಿಗಳಿಗೆ ಸೂಚನೆಗಳು:–**

| | |
|---|---|
| 1 | ಹಾಲಿಕಾರ್ಯನಿರ್ವಹಿಸುತ್ತಿರುವ (ನಗರ ಸ್ಥಳೀಯ ಸಂಸ್ಥೆ)ಗಳಿಗೆ ಮಾತ್ರ ಸೀಮಿತಗೊಳಿಸಿ ನೇಮಕಾತಿ ಮಾಡಲಾಗುವುದು. ಕಾರಣ ಹಾಲಿ ನಗರ ಸಭೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರ ಲೋಡರ್ಸ್, ಯುಜಿಡಿ ಹೆಲ್ಪರ್ಸ್, ಕ್ಲೀನರ್ ಹಾಗೂ ಹೆಲ್ಪರ್ಸ್‌ಗಳಾಗಿ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರಸಭೆಯಲ್ಲಿ ಖಾಲಿ ಇರುವ ನೇರಪಾವತಿ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. |
| 2 | ಪೌರಕಾರ್ಮಿಕರು ಅಥವಾ ಲೋಡರ್ಸ್/ಕ್ಲೀನರ್ಸ್ ಅಂದರೆ ಸ್ವಚ್ಛತಾ ಪೌರಕಾರ್ಮಿಕರು ಅಥವಾ ಲೋಡರ್ಸ್/ಕ್ಲೀನರ್ ಗಳು ನಗರಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ ಕನಿಷ್ಟ 1 ವರ್ಷಗಳ ಕಾಲ ಕೆಲಸ ಮಾಡುತ್ತಿರುವ ನಗರಸಭೆಗಳಲ್ಲಿ ಹಾಲಿ ಹೊರಗುತ್ತಿಗೆ/ ದಿನಗೂಲಿ ಗುತ್ತಿಗೆ ಆಧಾರದಮೇಲೆ, ಕನಿಷ್ಟ ಒಂದು ವರ್ಷ ಪೌರಕಾರ್ಮಿಕ/ಲೋಡರ್ಸ್ ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್, ಹೆಲ್ಪರ್ಸ್ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ/ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. |
| 3 | ಅಭ್ಯರ್ಥಿಗಳಿಗೆ ಕನ್ನಡಭಾಷೆ ಮಾತನಾಡಲು ಕಡ್ಡಾಯವಾಗಿ ಬರುತ್ತಿರಬೇಕು. |
| 4 | ಅರ್ಜಿ ನಮೂನೆ ಹಾಗೂ ಸೂಚನೆಗಳನ್ನು ಸಂಬಂಧಿಸಿದ ನಗರಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು ರವರಲ್ಲಿ ದಿನಾಂಕ:22–09–2026 ಸಂಜೆ 5.30 ರೊಳಗೆ ಪಡೆಯುವುದು. ದಿನಾಂಕ:22–10–2026 ರಂದು ಸಂಜೆ 5.30 ಭರ್ತಿ ಮಾಡಿರುವ ಅರ್ಜಿಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕರೊಳಗಾಗಿ ಅಗತ್ಯ ದಾಖಲೆಗಳನ್ನು ಲಗತ್ತಿಸಿ ಸಲ್ಲಿಸುವುದು. |
| 5 | ಅರ್ಜಿಯಲ್ಲಿ ತಪ್ಪು/ಸುಳ್ಳು ಮಾಹಿತಿನೀಡಿ ಉದ್ಯೋಗಪಡೆಯವ ಅಭ್ಯರ್ಥಿಗಳ ನೇಮಕಾತಿಯನ್ನು ವಜಾಗೊಳಿಸುವು ದಲ್ಲದೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು. |
| 6 | ನಿಗದಿತ ದಿನಾಂಕದ ನಂತರ ಹಾಕಿದ ಅರ್ಜಿಯನ್ನು/ಅಪೂರ್ಣ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. |
| 7 | ವಯೋಮಿತಿ:– ಅರ್ಜಿ ಸಲ್ಲಿಸಲು ದಿನಾಂಕ 21–09–2026ಕ್ಕೆ ಕನಿಷ್ಟ 18 ವರ್ಷ ಗರಿಷ್ಟ 50 ವರ್ಷಗಳು ವಯೋಮಿತಿ ಹೊಂದಿರತಕ್ಕದ್ದು. |
| 8 | ಪರಿಶಿಷ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, 3ಬಿಗಳ ಪ್ರಮಾಣಪತ್ರಗಳು ಸಲ್ಲಿಸುವುದು. |

ಮೇಲ್ಕಂಡಂತೆ ನಿಗದಿಪಡಿಸಿದ ಎಲ್ಲಾ ದಾಖಲೆಗಳನ್ನು ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ ಮೂಲದಾಖಲಾತಿಗಳ ಪರಿಶೀಲನೆಯ ಸಮಯದಲ್ಲಿ ಕಡ್ಡಾಯವಾಗಿ ಹಾಜರು ಪಡಿಸತಕ್ಕದ್ದು.

ಹೆಚ್ಚಿನಮಾಹಿತಿಗೆ/ಸ್ಪಷ್ಟತೆಗಾಗಿ ಜಿಲ್ಲಾಧಿಕಾರಿಯವರ ಅಧಿಸೂಚನೆಯನ್ನು ಜಿಲ್ಲಾನಗರಾಭಿವೃದ್ಧಿಕೋಶ/ ಆಯಾ ನಗರ ಸ್ಥಳೀಯ ಸಂಸ್ಥೆಯಲ್ಲಿ ಪಡೆಯುವುದು ಅಥವಾ www.koppal.nic.in & www.koppal.mrc.gov.in ವೆಬ್ ಸೈಟ್ ನಲ್ಲಿ ವೀಕ್ಷಿಸುವುದು.

ನಾನು ಶ್ರೀಮತಿ/ಶ್ರೀ___________________________________ಘೋಷಿಸುವುದೇನೆಂದರೆ, ಈ ಮೇಲೆ ನಮೂದಿಸಿದ ಎಲ್ಲಾ ದಾಖಲೆಗಳು ಹಾಗೂ ವಿವರಗಳು ಸರಿಯಿರುತ್ತದೆ ಎಂದು ದೃಢೀಕರಿಸುತ್ತೇನೆ. ಅರ್ಜಿಯಲ್ಲಿ ತಪ್ಪು/ ಸುಳ್ಳುದಾಖಲೆಗಳು ಕಂಡುಬಂದಲ್ಲಿ ಸೂಕ್ತ ಶಿಸ್ತುಕ್ರಮಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ :

ದಿನಾಂಕ :ಅಭ್ಯರ್ಥಿಯಸಹಿ

ಮೊ.ನಂ.

ಇವರಿಗೆ,
ಮಾನ್ಯಅಧ್ಯಕ್ಷರು,
ಪೌರಕಾರ್ಮಿಕರ ನೇರಪಾವತಿ
ಆಯ್ಕೆಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಕೊಪ್ಪಳಜಿಲ್ಲೆ

## ಪೌರಾಯುಕ್ತರುಗಳ ಶಿಫಾರಸ್ಸು

1.ಶ್ರೀ/ಶ್ರೀಮತಿ_________________________ತಂದೆ/ಗಂಡ/ತಾಯಿ _____________________________________ಇವರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಟ ಒಂದು ವರ್ಷ ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್, ಹೆಲ್ಪರ್ಸ ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ______ ವರ್ಷಗಳಿಗಿಂತ ಕಡಿಮೆ ಇಲ್ಲದೇ ನಿರಂತರವಾಗಿ ದಿನಾಂಕ________________ ರಿಂದ ದಿನಾಂಕ ____________________________ ವರ್ಷಗಳಿಗೂ ಮೇಲ್ಪಟ್ಟು ಸತತವಾಗಿ ಕೆಲಸನಿರ್ವಹಿಸುತ್ತಿದ್ದಾರೆ.

2.ಶ್ರೀ/ಶ್ರೀಮತಿ___________________________ತಂದೆ/ಗಂಡ/ತಾಯಿ ____________________________________ ಇವರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಹಿಂದೆ ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್ 19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರ ಕಾರಣಗಳಿಂದ ಮರಣವಾದ ಕುಟುಂಬ ಸದಸ್ಯ ಅಭ್ಯರ್ಥಿಯಾಗಿರುತ್ತಾರೆ/ ಯಾಗಿರುವುದಿಲ್ಲ.

3..ಶ್ರೀ/ಶ್ರೀಮತಿ_________________________ತಂದೆ/ಗಂಡ/ತಾಯಿ _____________________________________ಇವರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಟ ಒಂದು ವರ್ಷ ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್, ಹೆಲ್ಪರ್ಸ ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ______ ವರ್ಷಗಳಿಗಿಂತ ಕಡಿಮೆ ಇಲ್ಲದೇ ನಿರಂತರವಾಗಿ ದಿನಾಂಕ________________ ರಿಂದ ದಿನಾಂಕ ____________________________ ವರ್ಷಗಳಿಗೂ ಮೇಲ್ಪಟ್ಟು ಸತತವಾಗಿ ಕೆಲಸನಿರ್ವಹಿರುವ ಸ್ಥಳೀಯ ಸ್ವಚ್ಚತಾ ಕೆಲಸಗಾರರಾಗಿರುತ್ತಾರೆ.

4.ಶ್ರೀ/ಶ್ರೀಮತಿ______________________________ತಂದೆ/ಗಂಡ/ತಾಯಿ _____________________________________ ಇವರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ಥರುಗಳ ಅಥವಾ ಅವರ ಕುಟುಂಬ ಸದಸ್ಯ ಅಭ್ಯರ್ಥಿಯೇ ಹೌದು/ಇಲ್ಲ

5. ಸದರಿಯವರು ಸಲ್ಲಿಸಿರುವ ದಾಖಲೆಗಳನ್ವಯ ___________________ ವರ್ಗಕ್ಕೆ ಸೇರಿದವರಾಗಿರುತ್ತಾರೆ.

6. ಸದರಿಯವರು ಜನ್ಮದಿನಾಂಕಕ್ಕೆ ಹಾಜರುಪಡಿಸಿದ ದಾಖಲೆಗಳನ್ವಯ ಜನ್ಮದಿನಾಂಕ – – ಇದ್ದು, ________ ವಯಸ್ಸಿನವರಾಗಿರುತ್ತಾರೆ.

ಸದರಿಯವರು ಸಲ್ಲಿಸಿರುವ ಜನ್ಮದಿನಾಂಕ, ಶೈಕ್ಷಣಿಕ ‑ವಿದ್ಯಾರ್ಹತೆ, ಜಾತಿಪ್ರಮಾಣಪತ್ರ, 01ವರ್ಷಕ್ಕಿಂತ ಕಡಿಮೆ ಇಲ್ಲದೇ ಸದರಿ ನಿಯಮ ಜಾರಿಗೆಬಂದ ದಿನಾಂಕದಲ್ಲಿಯೂ ಸತತವಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ದೃಢೀಕರಿಸಿ ನೈರ ಪಾವತಿ ಆಯ್ಕೆಗಾಗಿ ಶಿಫಾರಸ್ಸ ಮಾಡಲಾಗಿದೆ.

ಪರಿಸರ ಅಭಿಯಂತರರು ಹಿರಿಯ/ ಕಿರಿಯಆರೋಗ್ಯನಿರೀಕ್ಷಕರು — ಕಛೇರಿ ವ್ಯವಸ್ಥಾಪಕರು

ನಗರಸಭೆ _____ — ನಗರಸಭೆ __________

ಪೌರಾಯುಕ್ತರು

ನಗರಸಭೆ ______